## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 258/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ವಿಜಯಲಕ್ಷ್ಮಿ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ರಾಜ್ ಕುಮಾರ್ | | **06.01.2025** |
| **ವಯಸ್ಸು** | ಃ **43** **ವರ್ಷ** | | |
| **ವೃತ್ತಿ** | ಃ ಗೃಹಿಣಿ | **ಪ್ರಾ.ಸಾ.** ಃ | **13** |
| **ವಾಸಸ್ಥಳ** | ಃ ಕೆರೆತೊಣ್ಣೂರು | **ಚಾ.ಸಾ.** ಃ | **07** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*25.05.2023* ರಂದು ನಮ್ಮ ಗ್ರಾಮದ ಮಮತಾ ಎನ್ನುವ ಅಂಗನವಾಡಿ ಶಿಕ್ಷಕಿ ಕೊಲೆಯಾಗಿದ್ದಾಗ ನಾನು ಅವರ ದೇಹ ನೋಡಲು ಮೈಸೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ಅದು ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಇತ್ತು. ಆ ಕಾಲಕ್ಕೆ ನಾನು ಆಸ್ಪತ್ರೆಯ ಶವಾಗಾರದಲ್ಲಿ ಮಮತಾ ಇವರ ಶವವನ್ನು ನೋಡಿದ್ದೆ. ಆ ಕಾಲಕ್ಕೆ ಮಮತಾ ಇವರ ಕಿವಿ ಮತ್ತು ಮೂಗಿನಲ್ಲಿ ರಕ್ತ ಬಂದಿತ್ತು ಮತ್ತು ತಲೆಯ ಹಿಂಭಾಗದಲ್ಲಿ ಗಾಯವಾಗಿ ರಕ್ತ ಹೆಪ್ಪು ಗಟ್ಟಿತ್ತು. ಮಮತಾ ಇವರು ಬೇಕರಿ ಮಾಡಲು ಕೊಟ್ಟಿದ್ದ ಹಣವನ್ನು ಕೇಳಲು ಹೋದಾಗ ಅವರ ಕೊಲೆಯಾಗಿದೆ ಎಂದು ಆ ಕಾಲಕ್ಕೆ ಗೊತ್ತಾಗಿತ್ತು. ಆ ಕಾಲಕ್ಕೆ ಒಬ್ಬ ಮೋಹನ್ ಕುಮಾರ್ ಎನ್ನುವವರು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು ಆದರೆ ನಾನು ಅವರನ್ನು ನೋಡಿಲ್ಲ. ಶವ ಪಂಚನಾಮೆ ಕಾಲಕ್ಕೆ ಪಂಚನಾಮೆಗೆ ನನ್ನ ಸಹಿ ಪಡೆದಿದ್ದರು. ಮಹಜರ್

ಕಾಲಕ್ಕೆ ಎಸ್.ಕುಮಾರ್, ರಾಜು, ರಮೇಶ, ಸೋಮಶೇಖರ ಹಾಜರಿದ್ದರು. ಕೊಲೆಯಾದ ಮರುದಿನ ಬೆಳಗ್ಗೆ 8.30 ರಿಂದ 10.30 ರವರೆಗೆ ಆ ಮಹಜರ್ ಮಾಡಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-3 ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ- 1 ಮತ್ತು 2 ಬಟ್ಟೆಗಳು ಮೃತ ಮಮತಾ ಇವರ ಮೈಮೇಲೆ ಇದ್ದ ಬಟ್ಟೆಗಳಿವೆ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ.ಎಸ್ ರವರಿಂದಃ-

2. 6-7 ವರ್ಷಗಳಿಂದ ನನಗೆ ಮಮತಾ ಇವರ ಪರಿಚಯ ಇತ್ತು. ಮಮತಾ ಇವರು ಕೆರೆತೊಣ್ಣುರು ಗ್ರಾಮದಲ್ಲೇ ವಾಸವಿದ್ದರು. ಮಮತಾ ಇವರಿಗೆ ಅವರ ಗಂಡನೊಂದಿಗೆ ಸಂಬಂದ ಚೆನ್ನಾಗಿ ಇತ್ತು. ಮಮತಾ ಇವರು ಪರಿಚಯವರಿಗೆ ಹಣಕಾಸಿನ ಸಹಾಯ ಮಾಡುತ್ತಿದ್ದರು. ಮಮತಾ ಇವರು ನಮ್ಮ ಗ್ರಾಮ ಬಿಟ್ಟು ಬೇರೆ ಯಾವುದಾದರೂ ಊರಿನಲ್ಲಿ ಏನನ್ನಾದರೂ ವ್ಯಾಪಾರ ಮಾಡುತ್ತಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ. ಮಮತಾಳ ಕೊಲೆಯಾದಾಗ ನಾನು ಮೈಸೂರಿನಲ್ಲೇ ಇರುವ ನನ್ನ ಅಕ್ಕನ ಮನೆಯಲ್ಲಿ ಇದುದ್ದರಿಂದ ಆ ಬಗ್ಗೆ ಗೊತ್ತಾಗಿ ನೋಡಲು ಹೋಗಿದ್ದೆ. ಮಮತಾಳ ಕೊಲೆಯಾಗಿದ್ದ ದಿನ ಮದ್ಯಾಹ್ನ 2 ಗಂಟೆ ವೇಳೆಯಲ್ಲಿ ನಾನು ನನ್ನ ಅಕ್ಕನ ಮನೆಗೆ ಹೋಗಿದ್ದೆ. ಆ ದಿನ ರಾತ್ರಿ 9 ಗಂಟೆಗೆ ನನಗೆ ಮಮತಾಳ ಕೊಲೆಯಾಗಿದ್ದ ಬಗ್ಗೆ ಗೊತ್ತಾಗಿತ್ತು. ಗೊತ್ತಾದ ಕೂಡಲೇ ಆಸ್ಪತ್ರೆಗೆ ಹೋಗಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಮಮತಾಳ ಗಂಡ ನಮ್ಮ ಗ್ರಾಮದವರೇ ಎಂದರೆ ನಿಜ. ಅವರು ನನ್ನ ಪರಿಚಯಸ್ಥರು ಎಂದರೆ ಸ್ವಲ್ಪ ಸ್ವಲ್ಪ ಪರಿಚಯ ಇದೆ. ಆಸ್ಪತ್ರೆಗೆ ನಾನು ಮತ್ತು ನನ್ನ ಅಕ್ಕ ಹೋಗಿದ್ದೆವು. ನಾನು ಹೋದಾಗ ಅಲ್ಲಿ 25-30 ಜನ ಇದ್ದರು. ಆ ಕಾಲಕ್ಕೆ ಕೆರೆತೊಣ್ಣುರು ಗ್ರಾಮಸ್ಥರು ಮತ್ತು ನಮ್ಮನ್ನು ಬಿಟ್ಟು ಬೇರೆ

ಯಾರು ಇರಲಿಲ್ಲ. ನಿ.ಪಿ–*3* ಕ್ಕೆ ಸಹಿ ಮಾಡಿದಾಗ ನಮ್ಮ ಗ್ರಾಮದವರು ಹಾಜರಿದ್ದರು. ಮಹಜರ್ ನಲ್ಲಿ ಏನು ಬರೆದಿದೆ ಎಂದು ಆ ಕಾಲಕ್ಕೆ ನನಗೆ ಹೇಳಿದ್ದರು. ಪೋಲೀಸ್ ಠಾಣೆಯಲ್ಲಿ ನಾನು ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಮತಾಳ ದೇಹದ ಮೇಲೆ ಇದ್ದ ಬಟ್ಟೆಗಳನ್ನು ನನ್ನ ಸಮಕ್ಷಮ ಅಳತೆ ಮಾಡಿರಲಿಲ್ಲ. ಮಹಜರ್ ಕಾಲಕ್ಕೆ ಗಾಯಗಳ ಉದ್ದ ಅಗಲಗಳನ್ನು ಅಳತೆ ಮಾಡಿರಲಿಲ್ಲ. ನನ್ನ ಸಮಕ್ಷಮ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮಮತಾ ಯಾವ ರೀತಿ ಮರಣಹೊಂದಿದ್ದಾಳೆ ಎಂದು ನಾನು ನೋಡಿಲ್ಲ. ಮಹಜರ್ ಕಾಲಕ್ಕೆ ನನಗೆ ಆ ಬಗ್ಗೆ ಗೊತ್ತಾಗಿದೆ. ರಾಮೇಗೌಡರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**